# ಕರ್ನಾಟಕ ಸರ್ಕಾರದ ನಡವಳಿಗಳು

ವಿಷಯ:- ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ವ್ಯವಸ್ಥಾಪಕರು (ಇಂಜಿನಿಯರಿಂಗ್), ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ. ಇವರ ಗುತ್ತಿಗೆ ಅವಧಿಯನ್ನು ವಿಸ್ತರಿಸುವ ಬಗ್ಗೆ.

ಓದಲಾಗಿದೆ:-

1. ಸರ್ಕಾರದ ಆದೇಶ ಸಂಖ್ಯೆ. ಗ್ರಾಅಪ 176 ಸೇಶಿಕಾ 2010, ದಿನಾಂಕ. 01-09-2010.

2. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ಇವರ ಪತ್ರ ಸಂಖ್ಯೆ. ಮುಇಂ/ ಪಂರಾಇಂಇ/ಬೆಂ/ಸಿ-10/2011-12/13, ದಿ. 03-04-2012.

## ಪ್ರಸ್ತಾವನೆ:

ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯ ವೃಂದ ನಿರ್ವಹಣಾ ಪ್ರಾಧಿಕಾರದ ಸಭಾ ನಡವಳಿ ದಿನಾಂಕ. 12-07-2010ರಲ್ಲಿ ಧಾರವಾಡ ಹಾಲು ಉತ್ಪಾದಕರ ಸಂಘ, ಧಾರವಾಡ ಈ ಸಂಸ್ಥೆಯ ಸೇವೆಗೆ ಸೇರಿರುವ ತಾಂತ್ರಿಕ ಅಧಿಕಾರಿಯಾದ ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಇವರನ್ನು ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಲಘಟಗಿ ಇಲ್ಲಿ ಶ್ರೀ ಎಸ್.ಎನ್.ಗೌಡರ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ರವರ ಜಾಗಕ್ಕೆ ಸ್ಥಳ ನಿಯುಕ್ತಿಗೊಳಿಸಲು ನಿರ್ಣಯಿಸಲಾಗಿದ್ದನ್ನು ಅನುಸರಿಸಿ, ಮೇಲೆ ಕ್ರಮ ಸಂಖ್ಯೆ (1)ರಲ್ಲಿ ಓದಲಾದ ದಿನಾಂಕ. 01-09-2010ರ ಆದೇಶದಲ್ಲಿ ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ವ್ಯವಸ್ಥಾಪಕರು (ಇಂಜಿನಿಯರಿಂಗ್) ಇವರನ್ನು ಗುತ್ತಿಗೆ ಆಧಾರದ ಮೇಲೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಲಘಟಗಿ ಇಲ್ಲಿನ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯಲ್ಲಿ ಒಂದು ವರ್ಷದ ಅವಧಿಗೆ ನೇಮಿಸಲಾಗಿತ್ತು.

ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಇವರನ್ನು ಅಭಿವೃದ್ಧಿ ಕಾಮಗಾರಿಗಳ ಹಿತದೃಷ್ಟಿಯಿಂದ ಇನ್ನೂ ಒಂದು ವರ್ಷದ ಅವಧಿಗೆ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಲಘಟಗಿ ಇಲ್ಲಿಯೇ ಮುಂದುವರೆಸುವಂತೆ ಮೇಲೆ ಕ್ರಮ ಸಂಖ್ಯೆ (2)ರಲ್ಲಿ ಓದಲಾದ ದಿನಾಂಕ. 03-04-2012ರ ಪತ್ರದಲ್ಲಿ ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು ರವರು ಕೋರಿರುತ್ತಾರೆ.

ಪ್ರಸ್ತಾವನೆಯನ್ನು ಕೂಲಂಕಷವಾಗಿ ಪರಿಶೀಲಿಸಿ, ಶ್ರೀ ಪ್ರಭುಅಂದಾನಪ್ಪ ಕನವಳ್ಳಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಲಘಟಗಿ ಇವರ ಗುತ್ತಿಗೆ ಅವಧಿಯನ್ನು ದಿನಾಂಕ. 01-04-2013 ರವರೆಗೆ ವಿಸ್ತರಿಸಲು ಸರ್ಕಾರವು ನಿರ್ಧರಿಸಿದೆ. ಅದರಂತೆ ಈ ಕೆಳಕಂಡ ಆದೇಶ.

## *ಆದೇಶ ಸಂಖ್ಯೆ: ಗ್ರಾಅಪ 296 ಸೇಶಿಕಾ 2012, ಬೆಂಗಳೂರು, ದಿನಾಂಕ. 01-06-2012*

ಪ್ರಸ್ತಾವನೆಯಲ್ಲಿ ವಿವರಿಸಿರುವ ಅಂಶಗಳ ಕಾರಣಗಳಿಂದ, ಕರ್ನಾಟಕ ನಾಗರೀಕ ಸೇವೆ(ಸಾಮಾನ್ಯ ನೇಮಕಾತಿ) ನಿಯಮಗಳು 1977ರ ನಿಯಮ 15(1)(ಬಿ)(ii) ರನ್ವಯ ಈ ಆದೇಶಕ್ಕೆ ಲಗತ್ತಿಸಿರುವ ಷರತ್ತು ಮತ್ತು ನಿಬಂದನೆಗಳಿಗೆ ಒಳಪಟ್ಟು ಧಾರವಾಡ ಹಾಲು ಉತ್ಪಾದಕರ ಸಂಘ, ಧಾರವಾಡ ಈ ಸಂಸ್ಥೆಯ ಸೇವೆಗೆ ಸೇರಿರುವ ತಾಂತ್ರಿಕ ಅಧಿಕಾರಿಯಾದ

ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಪಂಚಾಯತ್ ರಾಜ್ ಇಂಜಿನಿಯರಿಂಗ್ ಉಪ ವಿಭಾಗ, ಕಲಘಟಗಿ ಇವರ ಗುತ್ತಿಗೆ ಅವಧಿಯನ್ನು ದಿನಾಂಕ. 01-04-2013 ರವರೆಗೆ ಮುಂದುವರೆಸಿದೆ.

ಕರ್ನಾಟಕ ರಾಜ್ಯಪಾಲರ ಆದೇಶಾನುಸಾರ
ಮತ್ತು ಅವರ ಹೆಸರಿನಲ್ಲಿ

01/6/2012

(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.

ಪ್ರತಿ:

1. ಮಹಾಲೇಖಪಾಲರು, (ಅ ಮತ್ತು ಇ) ಕರ್ನಾಟಕ, ಬೆಂಗಳೂರು.
2. ಸರ್ಕಾರದ ಪ್ರಧಾನ ಕಾರ್ಯದರ್ಶಿಯವರು, ಲೋಕೋಪಯೋಗಿ ಇಲಾಖೆ.
3. ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿ, ಜಿಲ್ಲಾ ಪಂಚಾಯತ್, ಧಾರವಾಡ.
4. ಮುಖ್ಯ ಇಂಜಿನಿಯರ್, ಪಂಚಾಯತ್ ರಾಜ್ ಇಂಜಿನಿಯರಿಂಗ್ ಇಲಾಖೆ, ಬೆಂಗಳೂರು.
5. ಮುಖ್ಯ ಕಾರ್ಯಾಚರಣೆ ಅಧಿಕಾರಿ, ಕೆ.ಆರ್.ಆರ್.ಡಿ.ಎ., ಬೆಂಗಳೂರು.
6. ಮುಖ್ಯ ಇಂಜಿನಿಯರ್, ಸಂಪರ್ಕ ಮತ್ತು ಕಟ್ಟಡ (ದ), ಬೆಂಗಳೂರು / ಧಾರವಾಡ (ಉತ್ತರ)
7. ವ್ಯವಸ್ಥಾಪಕ ನಿರ್ದೇಶಕರು, ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ ಧಾರವಾಡ.
8. ಮಾನ್ಯ ಗ್ರಾ.ಅ.ಪಂ.ರಾಜ್ ಸಚಿವರ ಆಪ್ತ ಕಾರ್ಯದರ್ಶಿ.
9. ಸರ್ಕಾರದ ಅಧೀನ ಕಾರ್ಯದರ್ಶಿ, ಲೋಕೋಪಯೋಗಿ ಇಲಾಖೆ, (ಸೇವೆಗಳು-ಎ)
10. ಗ್ರಾ.ಅ.ರಾಜ್ ಇಲಾಖೆಯ ಕಾರ್ಯದರ್ಶಿಯವರು ಮತ್ತು ಉಪ ಕಾರ್ಯದರ್ಶಿಯವರು (ಆಡಳಿತ) ಇವರ ಆಪ್ತ ಸಹಾಯಕರು.
11. ಸಂಬಂಧಿಸಿದ ಅಧಿಕಾರಿಗೆ.
12. ಹೆಚ್ಚುವರಿ ಪ್ರತಿ:ರಕ್ಷಾ ಕಡತ:ಮಾಹಿತಿ ಕೇಂದ್ರ.

# <u>ಗುತ್ತಿಗೆ / ಒಪ್ಪಂದದ ನೇಮಕಾತಿಯ ಷರತ್ತು ಮತ್ತು ನಿಬಂಧನೆಗಳು</u>

1. **<u>ಅವಧಿ:</u>** ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ವ್ಯವಸ್ಥಾಪಕರು (ಇಂಜಿನಿಯರಿಂಗ್), ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ ಇವರ ಒಪ್ಪಂದದ ನೇಮಕಾತಿಯ ಅವಧಿಯು ದಿನಾಂಕ. 01-04-2013 ರವರೆಗೆ ಅಥವಾ ಮುಂದಿನ ಆದೇಶ ಇವುಗಳಲ್ಲಿ ಯಾವುದು ಮೊದಲೋ ಅಲ್ಲಿಯವರೆಗೆ ಮಾತ್ರ ಇರುತ್ತದೆ.

2. **<u>ಗುತ್ತಿಗೆ ನೇಮಕಾತಿಯ ಪ್ರಾರಂಭ ಹಾಗೂ ಅಂತ್ಯ :</u>** ಸದರಿ ಅಧಿಕಾರಿರವರ ಒಪ್ಪಂದದ ನೇಮಕಾತಿಯು ದಿನಾಂಕ. 30-09-2011 ರಿಂದ ಪ್ರಾರಂಭಗೊಂಡು ಹುದ್ದೆಯ ಪ್ರಭಾರವನ್ನು ಹಿಂದಕ್ಕೆ ವಹಿಸಿಕೊಟ್ಟ ದಿನಾಂಕದಂದು ಮುಕ್ತಾಯಗೊಳ್ಳುತ್ತದೆ.

3. **<u>ವೇತನ ಮತ್ತು ಇತರೆ ಭತ್ಯೆಗಳು:</u>** ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ವ್ಯವಸ್ಥಾಪಕರು (ಇಂಜಿನಿಯರಿಂಗ್), ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ, ಇವರು ಒಪ್ಪಂದದ ನೇಮಕಾತಿಯ ಅವಧಿಯಲ್ಲಿ ಅವರ ಮಾತೃ ಇಲಾಖೆಯಲ್ಲಿ ಪಡೆಯುತ್ತಿದ್ದ ವೇತನ, ತುಟ್ಟಿಭತ್ಯೆ, ಕಾರ್ಯನಿರ್ವಹಿಸುವ ಸ್ಥಳಕ್ಕೆ ಅನ್ವಯಿಸುವ ಮನೆ ಬಾಡಿಗೆ ಭತ್ಯೆ, ನಗರ ಪರಿಹಾರ ಭತ್ಯೆ ಪಡೆಯಲು ಅರ್ಹರಿರುತ್ತಾರೆ. ಆದರೆ, ನಿಯೋಜನೆಯ ಭತ್ಯೆ ಅನ್ಯ ಸೇವಾ ಭತ್ಯೆ ಅಥವಾ ಇನ್ನಾವುದೇ ಭತ್ಯೆ, ಹೆಚ್ಚಿನ ಕಾಲದ ಭತ್ಯೆ, ಬೋನಸ್, ಅನುಗ್ರಹ ಪೂರ್ವ ಭತ್ಯೆ ಪಡೆಯಲು ಅರ್ಹರಲ್ಲ.

4. **<u>ರಜಾ ನಿಯಮಗಳು:</u>** ಇವರ ಮಾತೃ ಇಲಾಖೆಯಲ್ಲಿನ ರಜಾ ನಿಯಮಗಳಿಗೆ ಅರ್ಹರಿರುತ್ತಾರೆ.

5. **<u>ರಜಾ ವೇತನ ವಂತಿಗೆ :</u>** ಅಧಿಕಾರಿಯವರ ಮೂಲ ವೇತನದ ಶೇಕಡಾ 11 ರಷ್ಟನ್ನು ರಜಾ ವೇತನ ವಂತಿಗೆಯಾಗಿ ಸರ್ಕಾರವು ಪಾವತಿಸುತ್ತದೆ.

6. **<u>ಭವಿಷ್ಯ ನಿಧಿ ವಂತಿಗೆ:</u>** ಅಧಿಕಾರಿಯ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇ.12ರಷ್ಟನ್ನು ಸರ್ಕಾರದ ವತಿಯಿಂದ ವಂತಿಗೆ, ಮತ್ತು ಅಧಿಕಾರಿಯ ಮೂಲ ವೇತನ ಮತ್ತು ತುಟ್ಟಿಭತ್ಯೆಯ ಶೇಕಡಾ 12 ರಷ್ಟನ್ನು ವಂತಿಗೆಯಾಗಿ ತಿಂಗಳಿನ ಸಂಬಳದಲ್ಲಿ ಕಟಾಯಿಸಿ, ಧಾರವಾಡ ಸಹಕಾರಿ ಹಾಲು ಉತ್ಪಾದಕರ ಸಂಘಗಳ ಒಕ್ಕೂಟ ನಿಯಮಿತ, ಧಾರವಾಡ ರವರಿಗೆ ಪಾವತಿಸತಕ್ಕದ್ದು.

7. **<u>ಉಪದಾನ ವಂತಿಗೆಗಳು:</u>** ಸರ್ಕಾರವು ಪ್ರತಿ ತಿಂಗಳು 8.33% ರಷ್ಟು ವೇತನ ಮತ್ತು ಅದಕ್ಕೆ ಸಮನಾದ ತುಟ್ಟಿ ಭತ್ಯೆಂತೊಂದಿಗೆ ಉಪದಾನ ವಂತಿಗೆಯಾಗಿ ನೀಡುತ್ತದೆ.

8. **<u>ವೈದ್ಯಕೀಯ ರಿಯಾಯಿತಿ:</u>** ಕರ್ನಾಟಕ ಸರ್ಕಾರಿ ನೌಕರರ (ವೈದ್ಯಕೀಯ ಹಾಜರಾತಿ) ನಿಯಮಗಳು, 1963ರ ಅನ್ವಯಂ ವೈದ್ಯಕೀಯ ವೆಚ್ಚವನ್ನು ಪಡೆಯಲು ಅರ್ಹರಿರುತ್ತಾರೆ.

9. ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆಯಲ್ಲಿ ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಗೆ ನಿಗಧಿಪಡಿಸಿರುವ ಕೆಲಸಗಳನ್ನು ಹಾಗೂ ಸರ್ಕಾರವು / ಮೇಲಾಧಿಕಾರಿಗಳು ಕಾಲಕಾಲಕ್ಕೆ ವಹಿಸಿಕೊಡುವ ಕರ್ತವ್ಯಗಳನ್ನು ನಿರ್ವಹಿಸತಕ್ಕದ್ದು.

10. ಶ್ರೀ ಪ್ರಭು ಅಂದಾನಪ್ಪ ಕನವಳ್ಳಿ, ಸಹಾಯಕ ವ್ಯವಸ್ಥಾಪಕರು (ಇಂಜಿನಿಯರಿಂಗ್) ರವರು ಸಹಾಯಕ ಕಾರ್ಯಪಾಲಕ ಇಂಜಿನಿಯರ್ ಹುದ್ದೆಯ ಕೆಲಸ ಕಾರ್ಯಗಳನ್ನು ಶ್ರದ್ಧಾಭಕ್ತಿಯಿಂದ ನಿರ್ವಹಿಸತಕ್ಕದ್ದು ಹಾಗೂ ತಮ್ಮ ಕರ್ತವ್ಯಗಳನ್ನು ನಿರ್ವಹಿಸುವಾಗ ತಿಳಿದು ಬರುವಂತಹ ಕಚೇರಿಯ ಅಧಿಕೃತ ಗೌಪ್ಯ ಮಾಹಿತಿಗಳ ಬಗ್ಗೆ ಕಟ್ಟುನಿಟ್ಟಾಗಿ ಗೌಪ್ಯತೆಯನ್ನು ಕಾಪಾಡತಕ್ಕದ್ದು.

11. ಅಧಿಕಾರಿಯ ದುರ್ನಡತೆಯಿಂದ ಸರ್ಕಾರಕ್ಕೆ ಉಂಟಾಗುವ ಯಾವುದೇ ನಷ್ಟಗಳನ್ನು ಭರಿಸಿಕೊಡಲು ಅಧಿಕಾರಿಯು ಭಾದ್ಯತೆಯುಳ್ಳವರಾಗಿರುತ್ತಾರೆ.

01/6/2012

(ಎನ್.ವೈ.ಸಾಗರ)
ಸರ್ಕಾರದ ಅಧೀನ ಕಾರ್ಯದರ್ಶಿ(ಸೇವೆಗಳು-ಎ),
ಗ್ರಾಮೀಣಾಭಿವೃದ್ಧಿ ಮತ್ತು ಪಂಚಾಯತ್ ರಾಜ್ ಇಲಾಖೆ.